# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

**ಸಿ.ಸಿ ನಂಃ 4502/2016**

ಚಾಸಾ-11, ಫ್ರಾಸಾಃ1

| | |
|---|---|
| ಸಾಕ್ಷಿದಾರರ ಹೆಸರು | ಎಂ. ನೀಲಕಂಠನ್ |
| ತಂದೆಯ ಹೆಸರು | ಆರ್ ಮುನಿಸ್ವಾಮಿ |
| ವಯಸ್ಸು | 58 ವರ್ಷ |
| ಉದ್ಯೋಗ | ಪಿ.ಐ, ಸಿ.ಐ.ಡಿ ಬೆಂಗಳೂರು |
| ವಾಸ | ಕೂಡ್ಲು ಗ್ರಾಮ, ಹೊಸೂರು ರೋಡ್, ಬೆಂಗಳೂರು |

**ದಿನಾಂಕಃ 08-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ದಂ.ಸಂ.ಪ್ರ.ಕಲಂ 299 ರಡಿಯಲ್ಲಿ ಹಿರಿಯ ಸಸಅ ಅವರಿಂದಃ**

1. ನಾನು ಅಕ್ಟೋಬರ್ 2013 ರಿಂದ ಜೂನ್ 2016 ರವರೆಗೆ ಮೈಕೊಲೇಔಟ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯ ನಿರ್ವಹಿಸಿದ್ದೇನೆ.
2. ದಿನಾಂಕಃ05-07-2015 ರಂದು ಠಾಣಾ ಕರ್ತವ್ಯದಲ್ಲಿ ಇದ್ದಾಗ ರಾತ್ರಿ 11.30 ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ಕೊಟ್ಟ ಲಿಖಿತ ದೂರನ್ನು ಪಡೆದು ಪ್ರಕರಣ ದಾಖಲಿಸಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ.
3. ಮರುದಿನ ದಿನಾಂಕಃ06-07-2015 ರಂದು ಚಾಸಾ-6 ಮತ್ತು 7 ರವರನ್ನು ಆರೋಪಿಯನ್ನು ಪತ್ತೆ ಹಚ್ಚಲು ನೇಮಿಸಿರುತ್ತೇನೆ. ಚಾಸಾ-6 ಮತ್ತು 7 ರವರು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ಆರೋಪಿಯನ್ನು ಹಿಡಿದು ನನ್ನ ಮುಂದೆ

ಹಾಜರುಪಡಿಸಿರುತ್ತಾರೆ. ಅದರ ಬಗ್ಗೆ ಚಾಸಾ-6 ಮತ್ತು 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

4. ಚಾಸಾ-4 ಮತ್ತು 5 ರವರನ್ನು ಠಾಣೆಗೆ ಕರೆಸಿ ಅವರಿಗೆ ವಿಷಯ ತಿಳಿಸಿ ಅವರ ಜೊತೆಯಲ್ಲಿ ಘಟನಾ ಸ್ಥಳಕ್ಕೆ ಹೋಗಿ ಪ್ರತ್ಯಕ್ಷ ಸಾಕ್ಷಿ ಚಾಸಾ-4 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಕ್ರಮವನ್ನು ಬೆಳಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರಿ ಪಂಚನಾಮೆ ಅಡಿಯಲ್ಲಿ ನೆಲದಲ್ಲಿ ಬಿದ್ದಿದ್ದ ರಕ್ತದ ಕಲೆಯನ್ನು ಹತ್ತಿಯಲ್ಲಿ ಸಂಗ್ರಹಿಸಿ ಅದರಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ಪ್ರತ್ಯೇಕವಾಗಿ ತೆಗೆದು ಅದನ್ನು ಸೀಲು ಮಾಡಿ ಜಪ್ತುಮಾಡಿರುತ್ತೇನೆ. ಚಾಸಾ-4 ರವರು ತೋರಿಸಿದ ಒಂದು ಹಸಿರು ರೇಷ್ಮೆ ಗೆರೆಗಳುಳ್ಳ ತುಂಬುತೋಳಿನ ಶರ್ಟ್ ಹಾಗೂ ಒಂದು ಟಿ-ಶರ್ಟ್ ಗಳನ್ನು ಪರಿಶೀಲಿಸಲಾಗಿ ರಕ್ತದ ಕಲೆಗಳು ಇದ್ದು ಅವುಗಳನ್ನು ಪ್ರತ್ಯೇಕ ಚೀಲಗಳಲ್ಲಿ ಹಾಕಿ ದಾರಗಳಲ್ಲಿ ಕಟ್ಟಿ ಜಪ್ತುಪಡಿಸಿಕೊಳ್ಳಲಾಯಿತು.

5. ಠಾಣೆಗೆ ಹಿಂದಿರುಗಿ ಆರೋಪಿಯನ್ನು ವಿಚಾರಿಸಿದಾಗ ಆತ ಚಾಕುವನ್ನು ಶೆಡ್ಡಿನಲ್ಲಿ ಇಟ್ಟಿರುವುದಾಗಿ ತಿಳಿಸಿರುತ್ತಾನೆ. ಆದ್ದರಿಂದ ಆರೋಪಿಯನ್ನು ಕರೆದುಕೊಂಡು ಪಂಚರ ಜೊತೆಯಲ್ಲಿ ಆರೋಪಿಯ ಶೆಡ್ಡಿಗೆ ಹೋಗಲಾಯಿತು. ಆರೋಪಿಯು ಸರ್ಕಾರಿ ವಾಹನದಿಂದ ಇಳಿದು ತನ್ನ ಮನೆಯ ಒಳಗೆ ಹೋಗಿದ್ದು, ನಾವು ಆತನನ್ನು ಹಿಂಬಾಲಿಸಿದೆವು. ಆತನು ತನ್ನ ಮನೆಯಲ್ಲಿನ ಮಂಚದ ಕೆಳಗೆ ಇಟ್ಟಿದ್ದ ತನ್ನ ಪ್ಯಾಂಟ್,

ಶರ್ಟ್ ಹಾಗೂ ಚಾಕುವನ್ನು ಹಾಜರುಪಡಿಸಿದನು. ಸದರಿ ಶರ್ಟ್ ಹಾಗೂ ಪ್ಯಾಂಟ್ ಗಳಲ್ಲಿ ರಕ್ತದ ಕಲೆಗಳು ಕಂಡುಬಂದಿತ್ತು. ಸದರಿ ಬಟ್ಟೆಗಳನ್ನು ಪ್ರತ್ಯೇಕ ಬಿಳಿಯ ಚೀಲದಲ್ಲಿ ಹಾಕಿ ದಾರದಲ್ಲಿ ಕಟ್ಟಿ ಸೀಲುಮಾಡಲಾಯಿತು. ಚಾಕುವನ್ನು ಪರಿಶೀಲಿಸಿದಾಗ ಅದು ಸುಮಾರು ಹತ್ತು ಇಂಚು ಉದ್ದದ ಚಾಕುವಾಗಿತ್ತು. ಸದರಿ ಚಾಕು ಮರದ ಹಿಡಿಕೆ ಹೊಂದಿದ್ದು ಅದರಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂದಿತ್ತು. ಸದರಿ ಚಾಕುವನ್ನು ಬಿಳಿ ಬಟ್ಟೆಯಲ್ಲಿ ಹಾಕಿ , ದಾರದಲ್ಲಿ ಕಟ್ಟಿ ಸೀಲು ಮಾಡಲಾಯಿತು. ಸದರಿ ವಸ್ತುಗಳನ್ನು ಪಂಚನಾಮೆ ಅಡಿ ಜಪ್ತು ಪಡಿಸಿಕೊಳ್ಳಲಾಯಿತು. ಪಂಚನಾಮೆಯನ್ನು ಬೆಳಗ್ಗೆ 11.00 ಗಂಟೆಯಿಂದ 12.00 ಗಂಟೆಯವರೆಗೆ ಜರುಗಿಸಲಾಯಿತು.

6. ಠಾಣೆಗೆ ಹಿಂದಿರುಗಿ ಜಪ್ತು ಪಡಿಸಿಕೊಂಡ ವಸ್ತುಗಳನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕಾಗಿ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ.

7. ಅದೇ ದಿನ ಗಾಯಳುಗಳಾದ ಚಾಸಾ–2 ಮತ್ತು 3 ರವರ ಹೇಳಿಕೆಗಳನ್ನು ಸಾಯಿ ರಾಮ ಆಸ್ಪತ್ರೆಯಲ್ಲಿ ದಾಖಲಿಸಿಕೊಂಡಿದ್ದೇನೆ.

8. ದಿನಾಂಕಃ08–07–2015 ರಂದು ಪ್ರತ್ಯಕ್ಷ ಸಾಕ್ಷಿ ಚಾಸಾ–4 ರವರ ಹೇಳಿಕೆ ಹಾಗೂ ಚಾಸಾ–2 ಮತ್ತು 3 ರವರ ಮರುಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ.

9. ದಿನಾಂಕಃ14-07-2015 ರಂದು ಚಾಸಾ-10 ರವರಿಂದ ಗಾಯಳುಗಳ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ.

10. ದಿನಾಂಕಃ11-09-2015 ರಂದು ಚಾಸಾ-8 ರವರ ಜೊತೆಯಲ್ಲಿ ಜಪ್ತುಪಡಿಸಿಕೊಂಡಿದ್ದ ರಕ್ತದ ಮಾದರಿ, ಬಟ್ಟೆಗಳು ಮತ್ತು ಚಾಕುವನ್ನು ಪರೀಕ್ಷೆಗಾಗಿ ವಿಧಿ ವಿಜ್ಞಾನ ಪರೀಕ್ಷಾ ಕೇಂದ್ರ, ಮೈಸೂರಿಗೆ ಕಳುಹಿಸಿರುತ್ತೇನೆ. ಅವರು ಸದರಿ ವಸ್ತುಗಳನ್ನು ಪರೀಕ್ಷಾ ಕೇಂದ್ರಕ್ಕೆ ಕೊಟ್ಟು ಬಂದ ಬಗ್ಗೆ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

11. ದಿನಾಂಕಃ07-11-2015 ರಂದು ವಿಧಿ ವಿಜ್ಞಾನ ಪರೀಕ್ಷಾ ಕೇಂದ್ರ, ಮೈಸೂರು ಇವರಿಂದ ಪರೀಕ್ಷಾ ವರದಿಯನ್ನು ಪಡೆದುಕೊಂಡಿದ್ದೇನೆ.

12. ದಿನಾಂಕಃ16-01-2016 ರಂದು ಆರೋಪಿ ವಿರುದ್ಧ ದೋಷರೋಪಣಾ ಪಟ್ಟಿ ಸಲ್ಲಿಸಿದ್ದೇನೆ.

13. ಸಾಕ್ಷಿ ನೋಡಿ ಗುರುತಿಸಿದ ದಾಖಲೆಗಳನ್ನು ಮತ್ತು ಸಹಿಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

**ನಿಪಿಃ1**- ದೂರು,
**ನಿಪಿಃ1(ಎ)**- ಸಾಕ್ಷಿಯ ಸಹಿ,
**ನಿಪಿಃ2**- ಎಫ್.ಐ.ಆರ್,
**ನಿಪಿಃ2(ಎ)**- ಸಾಕ್ಷಿಯ ಸಹಿ,
**ನಿಪಿಃ3**- ಸ್ಥಳ ಪಂಚನಾಮೆ,

**ನಿಪಿಃ3(ಎ)**- ಸಾಕ್ಷಿಯ ಸಹಿ,

**ನಿಪಿಃ4-** ಸ್ಥಳ ಪಂಚನಾಮೆ,

**ನಿಪಿಃ4(ಎ)**- ಸಾಕ್ಷಿಯ ಸಹಿ,

**ನಿಪಿಃ5 ಮತ್ತು ನಿಪಿ-6**- ಗಾಯದ ಪ್ರಮಾಣ ಪತ್ರಗಳು,

**ನಿಪಿಃ5(ಎ) ಮತ್ತು ನಿಪಿ-6(ಎ)**-ಸಾಕ್ಷಿಯ ಸಹಿಗಳು,

**ನಿಪಿಃ7-** ಎಫ್.ಎಸ್.ಎಲ್ ವರದಿ,

**ನಿಪಿಃ7(ಎ)**- ಸಾಕ್ಷಿಯ ಸಹಿ.

**(ಪ್ರಕರಣದ ಮು.ಮಾಲುಗಳನ್ನು ತನಿಖಾಧಿಕಾರಿ ಹಾಜರುಪಡಿಸಿಲ್ಲದ ಕಾರಣ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ರಂಗೇಗೌಡ ಸಿ)
ಮು. ಮ. ಚಂ. ನ್ಯಾ ಬೆಂ. ನಗರ